**ದಿನಾಂಕ:15.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಡಿ.ಟಿ.ಬಿ ವಕೀಲರಿಂದಃ</u>**

4. ಘಟನೆಯ ಬಗ್ಗೆ ಪೊಲೀಸರು ನನ್ನ ಹೇಳಿಕೆಯನ್ನು ಬರೆದುಕೊಂಡಿಲ್ಲ. ಆದರೆ ಸ್ಥಳಕ್ಕೆ ಬಂದಾಗ ವಿಚಾರಣೆ ಮಾಡಿರುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳನ್ನು ಅದೇ ದಿನ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳಿರುತ್ತೇನೆ ಎಂದರೆ ನಿಜ. ನನ್ನ ತಂದೆಯ 2 ನೇ ಹೆಂಡತಿಯಾದ ಶ್ರೀಮತಿ ಸರೋಜಮ್ಮ ಆರೋಪಿಯ ಹತ್ತಿರವೇ ವಾಸವಾಗಿರುತ್ತಾರೆ ಎಂದರೆ ನಿಜ. ನಮ್ಮ ತಂದೆಗೆ ಸೇರಿದ 05 ಎಕರೆ 39 ಗುಂಟೆ ಜಮೀನನ್ನು ನಾನು, ನನ್ನ ತಮ್ಮ ಮತ್ತು ನನ್ನ ತಂಗಿ ಹಾಗೂ ನನ್ನ ತಾಯಿ ಹಂಚಿಕೊಂಡಿದ್ದೇವೆ ಎಂದರೆ ನಿಜ.

5. ನನ್ನ ತಂದೆಯ 2 ನೇ ಹೆಂಡತಿಯಾದ ಸರೋಜಮ್ಮನಿಗೆ ನಮ್ಮ ತಂದೆಯ ಆಸ್ತಿಯಲ್ಲಿ ಭಾಗಾಂಶ ಕೊಟ್ಟಿಲ್ಲ ಎಂದರೆ ನಿಜ. ನಮ್ಮ ತಂದೆಯ 2 ನೇ ಹೆಂಡತಿಯಾದ ಸರೋಜಮ್ಮಳನ್ನು ಯಾರು ನೋಡಿಕೊಳ್ಳಲು ಇಷ್ಟ ಪಡುತ್ತಾರೋ ಅವರಿಗೆ ನೋಡಿಕೊಳ್ಳದವರು ವರ್ಷಕ್ಕೆ ರೂ.15,000/-ಹಣವನ್ನು ಕೊಡಬೇಕೆಂದು ಪಂಚಾಯತಿದಾರರು ತೀರ್ಮಾನ ಮಾಡಿದ್ದರು ಎಂದರೆ ನಿಜ. ಪಂಚಾಯತುದಾರರು ತೀರ್ಮಾನ ಮಾಡಿದಂತೆ ಸರೋಜಮ್ಮನಿಗೆ ನಾನು ರೂ.15,000/-ಹಣವನ್ನು ಕೊಡಲಿಲ್ಲ ಎಂದರೆ ನಿಜ. ಆಗ ಸರೋಜಮ್ಮ ನನ್ನ ಹತ್ತಿರ ಬಂದು ರೂ.15,000/-ಹಣವನ್ನು ಕೊಡು ಎಂದು ಕೇಳುತ್ತಿದ್ದರು ಎಂದರೆ ನಿಜ.

6. ನಾನು ದಿನಾಂಕಃ05.05.1988 ರಂದು ಜನಿಸಿರುತ್ತೇನೆ. ನನ್ನ ಮತ್ತು ಆರೋಪಿಯ ಜಮೀನಿನ ನಡುವೆ ಬದು ಇದೆ ಎಂದರೆ ನಿಜ. ಸಾಮಾನ್ಯವಾಗಿ ಬುದುವಿನಲ್ಲಿ ಬೆಳೆದ ಹುಲ್ಲನ್ನು ಕೆತ್ತುತ್ತಾರೆ ಎಂದರೆ ನಿಜ. ನನಗೆ 01 ಎಕರೆ 20 ಗುಂಟೆ ಜಮೀನು ಬಿಟ್ಟು ಬೇರೆ ಜಮೀನು ಇಲ್ಲ ಎಂದರೆ ನಿಜ. ನಮ್ಮ ಹೊಲದಲ್ಲಿ ಕೆಲಸ ಇದ್ದಾಗ ಮಾಡಿ ಉಳಿದ ಸಮಯದಲ್ಲಿ ಬೇರೆಯವರ ಜಮೀನಿಗೆ ಕೆಲಸಕ್ಕೆ ಹೋಗುತ್ತೇನೆ ಎಂದರೆ ನಿಜ. ನಮ್ಮೂರಿನಿಂದ 02 ಕಿ.ಮೀ ದೂರದಲ್ಲಿ ಕಾಶಂಬಿ ಗ್ರಾಮ ಇದೆ ಎಂದರೆ ನಿಜ. ನನ್ನ ಹೆಂಡತಿ ಕಾಶಂಬಿ ಗ್ರಾಮಕ್ಕೆ ಮಲ್ಲಿಗೆ ಹೂವನ್ನು ಕೀಳಲು ಕೆಲಸಕ್ಕೆ ಹೋಗುತ್ತಾರೆ ಎಂದರೆ ನಿಜ.

7. ನಮ್ಮೂರಿನಲ್ಲಿ ನಾಗಪ್ಪ ಅಮರದ ಎಂಬ ವ್ಯಕ್ತಿ ಇದ್ದರು ಎಂದರೆ ನಿಜ. ಸದರಿ ವಕ್ತಿಯು ಈ ಘಟನೆಯಾದ ದಿನವೇ ನಮ್ಮೂರಿನಲ್ಲಿ ತೀರಿಕೊಂಡರು ಎಂದರೆ ನಿಜ. ಆಗ ನಾನು ನಾಗಪ್ಪ ಅಮರದ ಶವ ಸಂಸ್ಕಾರಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ. ಘಟನೆಯ ದಿನ ನನ್ನ ಹೆಂಡತಿ ಕಾಶಂಬಿ ಗ್ರಾಮಕ್ಕೆ ಮಲ್ಲಿಗೆ ಹೂ ಕೀಳಲು ಹೋಗಿದ್ದಳು ಎಂದರೆ ಸರಿಯಲ್ಲ.

8. ಗೋವಿನ ಜೋಳದ ಬೆಳೆಯು 15-20 ದಿನದ ಬೆಳೆಯಾಗಿತ್ತು. ಸಾಮಾನ್ಯವಾಗಿ ಗೆಪ್ರೀವಿನ ಜೋಳ ಬೆಳೆದು 1-1½ ತಿಂಗಳಾದ ಬಳಿಕ ಗೊಬ್ಬರ ಹಾಕುತ್ತಾರೆ ಎಂದರೆ ನಿಜ. ಈಗ ನನಗೆ ನಿಪಿ-4 ರ ಪೋಟೋ ತೋರಿಸುತ್ತಿದ್ದು, ಅದರಲ್ಲಿ ಗೋವಿನ ಜೋಳದ ಬೆಳೆಯು ಸಣ್ಣದಾಗಿ ಬೆಳೆದಿದೆ ಎಂದರೆ ನಿಜ. ಆದ ಕಾರಣ ಸಣ್ಣ ಗೋವಿನ ಜೋಳದ ಸಸಿಗೆ ಗೊಬ್ಬರ ಹಾಕಿದರೆ ಅದು ಸಾಯುತ್ತದೆ ಎಂದರೆ ಸರಿಯಲ್ಲ. ಘಟನೆಯಾದ ದಿನ ನಾನಾಗಲೀ ಅಥವಾ ನನ್ನ ಹೆಂಡತಿಯಾಗಲೀ ಗೋವಿನ ಜೋಳಕ್ಕೆ ಗೊಬ್ಬರ ಹಾಕಲು ಹೋಗಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿಯೂ ಸಹ ತನ್ನ ಹೊಲಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ.

9. ಆರೋಪಿಯು ನನಗೆ ಬೈದಿಲ್ಲ ಮತ್ತು ಸಲಕೆಯಿಂದ ಹೊಡೆದಿಲ್ಲ ಹಾಗೂ ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಜಗಳ ಬಿಡಿಸಲು ಬಂದ ನನ್ನ ಹೆಂಡತಿಗೆ ಆರೋಪಿಯು ಸೀರೆ ಹಿಡಿದು ಎಳೆದಿಲ್ಲ ಮತ್ತು ಅಪಮಾನ ಮಾಡಿಲ್ಲ ಎಂದರೆ ಸರಿಯಲ್ಲ. ಘಟನೆಯಾದ ದಿನ ನಾನು ಲುಂಗಿ ಮತ್ತು ಟವೆಲ್ ಹಾಕಿಕೊಂಡಿದ್ದೆನು. ನನಗೆ ಆದ ಗಾಯದಿಂದ ರಕ್ತ ಬಿದ್ದು ಅದು ನನ್ನ ಬಟ್ಟೆಗಳಿಗೆ ಮತ್ತು ನೆಲಕ್ಕೆ ಬಿದ್ದಿತ್ತು.

10. ನನ್ನನ್ನು ಹಾವೇರಿ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನನಗೆ ಕಣ್ಣು ಮಂಜಾಗಿತ್ತು. ಆದ ಕಾರಣ ಆಗ ನನ್ನ ಜೊತೆ ಯಾರು ಯಾರು ಇದ್ದರು ಮತ್ತು ಕಾರಿನ ಡ್ರೈವರ್ ಮತ್ತು ಕಾರಿನ ನೋಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ನನಗೆ ಆಗಿದ್ದ ಗಾಯದಿಂದ ರಕ್ತವು ಕಾರಿನ ಸೀಟಿನ ಮೇಲೆ ಬಿದ್ದಿತ್ತು. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಷ್ಟರಲ್ಲಿ ಸಂಜೆ 4.30 ರಿಂದ 5.00 ಗಂಟೆಯಾಗಿತ್ತು. ಆಗ ನನಗೆ ಪ್ರಜ್ಞೆ ತಪ್ಪಿತ್ತು. ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ನಂತರ ನನ್ನನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಆಂಬ್ಯುಲೆನ್ಸನಲ್ಲಿ ಕರೆದುಕೊಂಡು ಹೋದರು. ನನಗೆ ಕಿಮ್ಸ್ ಆಸ್ಪತ್ರೆಯಲ್ಲಿ 5-6 ದಿನಗಳ ನಂತರ ಪ್ರಜ್ಞೆ ಬಂತು. ಸದರಿ

ಅವಧಿಯಲ್ಲಿ ನನ್ನ ಜೊತೆ ಆಸ್ಪತ್ರೆಯಲ್ಲಿ ಚನ್ನಬಸನಗೌಡ ಪಾಟೀಲ್ ಮತ್ತು ಸುರೇಶ ಗೌಡ ಪಾಟೀಲ್ ಇದ್ದರು. ನಾನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ 15 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಹುಬ್ಬಳ್ಳಿಯ ಕಿಮ್ಸ ನಲ್ಲಿದ್ದಾಗ ಪೊಲೀಸರು ಅಲ್ಲಿಗೆ ಬಂದಿಲ್ಲ.

11. ನಾನು ಹುಬ್ಬಳ್ಳಿ ಕಿಮ್ಸ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದುಕೊಂಡು ಊರಿಗೆ ಹೋದಾಗ ಘಟನೆಯ ವಿಚಾರವನ್ನು ನಾನು ಊರಿನ ಜನರಿಗೆ ತಿಳಿಸಿರುವುದಿಲ್ಲ. ಘಟನೆಯಾದ ಮರು ದಿನ ನನ್ನ ಹೆಂಡತಿ ಪೊಲೀಸ್ ಠಾಣೆಯಲ್ಲಿ ಆರೋಪಿಯ ವಿರುದ್ಧ ದೂರನ್ನು ಕೊಟ್ಟಿರುತ್ತಾರೆ. ನನ್ನ ಹತ್ತಿರ ಮೋಟಾರ್ ಸೈಕಲ್ ಇರುತ್ತದೆ. ಘಟನೆಯ ಪೂರ್ವದಲ್ಲಿ ನಾನು ಮೋಟಾರ್ ಸೈಕಲ್ ಚಾಲನೆ ಮಾಡುತ್ತಿದ್ದೆನು. ಘಟನೆಯಾದ ಬಳಿಕ ನಾನು ಮೋಟಾರ್ ಸೈಕಲ್ ಚಾಲನೆ ಮಾಡುತ್ತಿಲ್ಲ, ನಾನು ಮೋಟಾರ್ ಸೈಕಲ್ ಮೇಲಿಂದ ಬಿದ್ದು ತಲೆಗೆ ಪೆಟ್ಟು ಹಚ್ಚಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆಗ ಮೋಟಾರ್ ಸೈಕಲ್ ಮೇಲಿಂದ ಬಿದ್ದಿದ್ದರಿಂದ ನನ್ನ ತಲೆಗೆ ಗಾಯ ಆಗಿ ರಕ್ತ ಬಂದಿತ್ತು ಎಂದರೆ ಸರಿಯಲ್ಲ.

12. ಸರೋಜಮ್ಮನು ನನ್ನ ಹತ್ತಿರ ಬಂದು 15 ಸಾವಿರ ಹಣ ಕೇಳಿದ್ದಕ್ಕೆ ಆರೋಪಿಯೇ ಕಾರಣ ಎಂದು ತಿಳಿದು ಆತನಿಗೆ ಬುದ್ದಿ ಕಲಿಸಬೇಕೆಂದು ನನ್ನ ಹೆಂಡತಿಯ ಮೂಲಕ ಸುಳ್ಳು ದೂರು ಕೊಡಿಸಿ, ಮೋಟಾರ್ ಸೈಕಲ್ ಮೇಲೆ ಬಿದ್ದು ಗಾಯಗೊಂಡ ವಿಚಾರವನ್ನು ದುರುಪಯೋಗಪಡಿಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

13. ಸಾಮಾನ್ಯವಾಗಿ ರೈತಾಪಿ ಜನರ ಹೊಲ ಮನೆಗಳಲ್ಲಿ ಸಲಿಕೆಗಳು ಇರುತ್ತವೆ ಎಂದರೆ ನಿಜ. ಮು.ಮಾ-1 ರ ಸಲಿಕೆ ನಮ್ಮದು ಎಂದರೆ ನಿಜ. ಆರೋಪಿಯು ಸದರಿ ನಮ್ಮ ಸಲಕೆಯನ್ನು ತೆಗೆದುಕೊಂಡು ನಮಗೆ ಹಲ್ಲೆ ಮಾಡಿ ಈ ದಿನ ಜೀವ ತೆಗೆಯುತ್ತೇವೆಂದು ಬೆದರಿಕೆ ಹಾಕಿರುತ್ತಾನೆ. ಆರೋಪಿಯು ಸದರಿ ಸಲಕೆಯನ್ನು ನಮ್ಮ ಹೊಲದಲ್ಲಿಯೇ ಒಗೆದು ಹೋಗಿದ್ದನು. ಆರೋಪಿಯು ಸಲಕೆಯಿಂದ ಹೊಡೆದಿದ್ದಾನೆಂದು ತೋರಿಸಲು ಅದನ್ನು ಇಟ್ಟು ಫೋಟೋ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಸರೋಜಮ್ಮನಿಗೆ ಕೊಡುವ ದುಡ್ಡನ್ನು

ತಪ್ಪಿಸುವ ಸಲುವಾಗಿ ಆರೋಪಿಯ ವಿರುದ್ದ  ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

14. ಶಂಕರಗೌಡ ಪಾಟೀಲ್ ನನ್ನ ಮಾವ ಎಂದರೆ ನಿಜ. ಆತನು ತಾವರಗೊಪ್ಪ ಗ್ರಾಮದಲ್ಲಿರುತ್ತಾನೆ ಎಂದರೆ ನಿಜ. ಈ ಕೇಸನ್ನು ಹಾಕಲು ನನ್ನ ಮಾವನೇ ಕಾರಣ ಎಂದರೆ ಸರಿಯಲ್ಲ. ನನ್ನ ಮಾವನ ಚಿತಾವಣೆ ಮೇರೆಗೆ ನನ್ನ ಹೆಂಡತಿ ಸುಳ್ಳು ದೂರು ಕೊಟ್ಟಿದ್ದು, ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.